ಶ್ರೀ ಹೆಚ್.ಡಿ. ರೇವಣ್ಣ: veto power ವಿಷಯ ಬೇಡ, ಬಾಕಿ ಬಗ್ಗೆ ಏನಿದೆ ಅದನ್ನು ಹೇಳಲಿ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸದಸ್ಯರು ತಟ್ಟಿಗೆರೆ ಗ್ರಾಮದ ಬಗ್ಗೆ ಏನು ಹೇಳಿದ್ದಾರೆ, ಅದನ್ನು Priority ಮೇಲೆ ಬಿಡುಗಡೆ ಮಾಡಲು ಆ 10ಕೋಟಿ ರೂಪಾಯಿಗಳಲ್ಲಿ ನಾನು ಆದೇಶ ಕೊಡುತ್ತೇನೆ.

<u>ರಾಜ್ಯದಲ್ಲಿರುವ ಬೃಹತ್ ಜಲಾಶಯಗಳು</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**80(251)**
ಸದಸ್ಯರ ಹೆಸರು	:	**ಶ್ರೀ. ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ)**
ಉತ್ತರಿಸುವ ಸಚಿವರು	:	**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ರಾಜ್ಯದಲ್ಲಿ ದೊಡ್ಡ ಜಲಾಶಯದಲ್ಲಿ ಒಂದಾದ ರಾಜಾ ಲಖಿಮಗೌಡಾ ಜಲಾಶಯ ನಿರ್ಮಾಣಗೊಂಡು ಹಲವಾರು ವರ್ಷಗಳು ಕಳೆದರೂ, ಕೃಷ್ಣರಾಜಸಾಗರ ಹಾಗೂ ಆಲಮಟ್ಟಿ ಜಲಾಶಯದ ಹಾಗೇ ಈ ಜಲಾಶಯದಲ್ಲೂ ಹೂತೋಟ ಮುಂತಾದ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಾಗದೇ ಕುಂಠಿತಗೊಂಡಿರುವುದು ನಿಜವೇ?

–ಹೌದು–

ಆ) ಈಗಾಗಲೇ ಕೃಷ್ಣರಾಜಸಾಗರ ಹಾಗೂ ಆಲಮಟ್ಟಿ ಜಲಾಶಯ ಮಾದರಿಯಲ್ಲೆ ಇದನ್ನು ಪ್ರವಾಸಿ ತಾಣವನ್ನಾಗಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

–ಇದೆ–

ಇ) ಇದೇ ರೀತಿ ಹಿಡಕಲ್ ಜಲಾಶಯವನ್ನು ಪ್ರವಾಸಿ ತಾಣವನ್ನಾಗಿಸುವ ಯೋಜನೆ ಸರ್ಕಾರಕ್ಕೆ ಇದ್ದಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡುವ ಮುಖಾಂತರ ಸದರಿ ಕಾಮಗಾರಿಗೆ ಚಾಲನೆ ನೀಡುವುದು ಯಾವಾಗ, ಹಾಗೂ ಈ ಕಾಮಗಾರಿ ಪೂರ್ಣಗೊಳ್ಳಲು ಎಷ್ಟು ಕಾಲಾವಕಾಶ ಬೇಕಾಗುವುದು?

–ಪರಿಶೀಲನೆಯಲ್ಲಿದೆ–

ಶ್ರೀ ಉಮೇಶ್ ವಿ.ಕತ್ತಿ: ರಾಜಾ ಲಖಿಮಗೌಡಾ ಜಲಾಶಯವನ್ನು 1971 ರಲ್ಲಿ ಕಟ್ಟಿ ಮುಗಿಯಬೇಕಾಗಿತ್ತು. ಇನ್ನೂ ಅದರ ಬಗ್ಗೆ ಮಾಡಬೇಕಾಗಿದೆ, ಮಾಡುವುದಿದೆ, ಹೌದು, ಪರಿಶೀಲಿಸುತ್ತಿದ್ದೇವೆ ಎಂದು ಇದೇ ಉತ್ತರವನ್ನು ಕೇಳುತ್ತಿದ್ದೇನೆ. Specifice

ಆಗಿ ಈ ಜಲಾಶಯ ಹಿಡ್ಕಲ್ ಜಲಾಶಯದ ಎದುರುಗಡೆ ದುಗ್ಗಾಳ್ ಜಲಾಶಯ ಬರುವುದರಿಂದ ಅಲ್ಲಿ ನಡುಗಡ್ಡೆ ಇದೆ, bird sanctuary ಇದೆ, ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದಕ್ಕೆ ಸಾಧ್ಯವಿದೆ. ಸರ್ಕಾರದಿಂದ ಮಾಡುವುದರಿಂದ ಸರ್ವೇ ಮಾಡಿಸಿ ಸರಿಯಾದ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. 15 ಕಿ.ಮೀ. ವ್ಯಾಪ್ತಿಯಲ್ಲಿ ಮೂರು ಜಲಪಾತಗಳು ಅಂದರೆ, ಗೋಕಾಕ್ ಫಾಲ್ಸ್, ಗೊಳಚಿನ ಮಲ್ಕಿ, ದುಗ್ಗಾಳ್ back water ಆದಾದ ಮೇಲೆ ನಡುಗಡ್ಡೆ ಕಟ್ಟಿ ಅದನ್ನೂ ಕಟ್ಟಬಹುದು. five star ಅಗಬಹುದು., ಅದರ ಜೊತೆಗೆ bird sanctuary ಮಾಡುವುದಕ್ಕೆ ಸಾಧ್ಯವಿದೆ. boating ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಅದು ಒಳ್ಳೆಯ ಪ್ರವಾಸಿ ಕೇಂದ್ರ ಆಗಬಹುದು. ಅದು ಬೆಂಗಳೂರಿನಿಂದಲೂ 500 ಕಿ.ಮೀ. ಆಚೆ ಇದೆ. ಬಾಂಬೆಯಿಂದಲೂ 500 ಕಿ.ಮೀ. ದೂರ ಇದ್ದು ಅದು centre point ನಲ್ಲಿದೆ. ಅದನ್ನೊಂದು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತನೆ ಮಾಡುವುದಕ್ಕೆ ಸಾಧ್ಯವಿದೆ. ಆ ಪೂರಾ ಜಾಗ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತಿರುವುದರಿಂದ ಪ್ರವಾಸೋದ್ಯಮ ಇದರ ಬಗ್ಗೆ ಏನೂ ಗಮನಹರಿಸುತ್ತಿಲ್ಲ. ತಾವಾದರೂ ಅವರನ್ನು ಕರೆಸಿ ಕೂಡಲೆ survey ಮಾಡಿಸಿ BOT ಆಧಾರದ ಮೇಲೆ ಕೊಡುವ ಕೆಲಸವನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ? ಅದಕ್ಕೆ ಕಾರ್ಯಕ್ರಮ ರೂಪಿಸಿ ಯಾವಾಗ ಮುಗಿಸುತ್ತೀರಿ? ಖಚಿತವಾದ ದಿನಾಂಕವನ್ನು ಹೇಳಬೇಕೆಂದು ಕೋರುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಬಹಳ ದಿನಗಳಿಂದ ಇದರ ಬಗ್ಗೆ ಚರ್ಚೆಯಾಗಿ ಹಲವಾರು ಸಭೆಗಳಾಗಿದ್ದು, 2001ರಲ್ಲಿ ಮತ್ತು 2003ರಲ್ಲೂ ಸಭೆ ನಡೆದಿದೆ. ಆ ವಿವರಗಳಿಗೆ ನಾನು ಹೋಗುವುದಿಲ್ಲ. ಈಗಾಗಲೇ ನಾವು ಕರ್ನಾಟಕ ನೀರಾವರಿ ನಿಗಮಕ್ಕೆ ಆದೇಶ ಕೊಟ್ಟು detailed project report ತಯಾರಿಸಿ ಎಂದು ಹೇಳಿದ್ದೆವು. ಅದು ಈಗಾಗಲೇ ತಯಾರಾಗಿದೆ. ಆ report ಅನ್ನು ಕೂಡಲೇ ಸರ್ಕಾರಕ್ಕೆ ಕೊಡುವಂತೆ ನಾನು ಹೇಳಿದ್ದೇನೆ. ಅದು ಬಂದ ಮೇಲೆ ಸರ್ಕಾರ ಒಂದು ನೀತಿಯನ್ನು ಮಾಡುತ್ತಿದೆ. ಯಲ್ಲಪ್ಪರೆಡ್ಡಿಯವರ ಸಮಿತಿ ಇತ್ತು, ಆ ಸಮಿತಿಯಲ್ಲಿ ಈ ತರಹ dam site development, canal ಪಕ್ಕದಲ್ಲಿರುವ forestation ನಡುಗಡ್ಡೆಗಳಿದ್ದಲ್ಲಿ herbal plantation ಮಾಡುವುದು, quarryಗಳಿದೆ ಅಲ್ಲಿ fisheries ಮಾಡುವ. ಬಗ್ಗೆ ಪ್ರವಾಸೋದ್ಯಮ ಅಭಿವೃದ್ಧಿ ಬಗ್ಗೆ ಈಗಾಗಲೇ ವರದಿಯನ್ನು ಕೊಟ್ಟಿದ್ದಾರೆ. ಕಾವೇರಿ ಜಲಾನಯನದಲ್ಲಿ ನಾಲ್ಕನ್ನು identify ಮಾಡಿ BOT ಆಧಾರದ ಮೇಲೆ ಕೊಡಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಆದರೆ, ಅದು ಕುಂಠಿತವಾಗಿದೆ. ಅದನ್ನು ಚುರುಕುಗೊಳಿಸುತ್ತಿದ್ದೇವೆ. ಅದಲ್ಲದೆ, ಈಗೇನು

ಕಾವೇರಿ ಜಲಾನಯನದಲ್ಲಾಗಿದೆ, ಅದೇ ರೀತಿ ಇದನ್ನೂ ಕೂಡ BOOT system ನಲ್ಲಿ ಕೊಡಬೇಕೆನ್ನುವ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಆ detailed project report ಬಂದ ಮೇಲೆ ಅದಕ್ಕೆ ಏನೇನು conditions ಹಾಕಬೇಕೋ ಎಂದು ತೀರ್ಮಾನ ಮಾಡಿ ಒಂದು ತಿಂಗಳಲ್ಲಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: Sufficient ಆಗಿ ಹೇಳಿದ್ದಾರೆ. ಈಗ ಬೊಮ್ಮಾಯಿಯವರು ನೀರಾವರಿ ಖಾತೆಯ ಸಚಿವರಾಗಿದ್ದಾರೆ. ಈಗ ನೀವು ಅದನ್ನು ಮಾಡಿಸಿಕೊಂಡುಬಿಡಿ.

ಶ್ರೀ ಹೆಚ್.ಡಿ. ರೇವಣ್ಣ: ಹಾರಂಗಿ, ಹೇಮಾವತಿ ನದಿಗೆ ಸಂಬಂಧಿಸಿದಂತೆ ಯಾವಾಗ ಮಾಡುತ್ತೀರಿ ಎನ್ನುವುದನ್ನು ದಯಮಾಡಿ ಹೇಳಬೇಕು.

<u>ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅಲೆಮಾರಿ ಜನಾಂಗದ ಆಶ್ರಮ ಶಾಲೆಗಳ ಸಂಖ್ಯೆ</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	114(499)
ಸದಸ್ಯರ ಹೆಸರು	:	ಶ್ರೀ. ಕೃಷ್ಣಮೂರ್ತಿ ಕೆ.ಎಂ. (ಕಡೂರು)
ವಿಷಯ	:	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಹೊಸದಾಗಿ ಪ್ರಾರಂಭಿಸಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗಗಳ ಆಶ್ರಮ ಶಾಲೆಗಳಿಗೆ ಬೋಧಕ/ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡುವ ಬಗ್ಗೆ.
ಉತ್ತರಿಸುವ ಸಚಿವರು	:	ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು)

ಅ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅಲೆಮಾರಿ ಜನಾಂಗದ ಆಶ್ರಮ ಶಾಲೆಗಳ ಸಂಖ್ಯೆ ಎಷ್ಟು

ಅಲೆಮಾರಿ/ ಅರೆ ಅಲೆಮಾರಿ ಜನಾಂಗದವರಿಗಾಗಿ 04 ಆಶ್ರಮ ಶಾಲೆಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ. ಅವುಗಳಲ್ಲಿ 02 ಆಶ್ರಮ ಶಾಲೆಗಳನ್ನು ಪ್ರಾರಂಭಿಸಲಾಗಿದೆ.